ಳೆನೇ ಸಾಲಿನಲ್ಲಿ ಈ ಬಗ್ಗೆ ಹಣವನ್ನು ಒದಗಿಸಂವುದಕ್ಕೆ ಸಾಧ್ಯವಾದರೆ ಅದನ್ನು ಕೊಡಿಸುವುದಕ್ಕೂ ಪ್ರಯತ್ನ ಮಾಡುತ್ತೇನೆ.

ಶಿವಮೊಗ್ಗ ತಾಲ್ಲೂಕು ಶೀಗೇಹಳ್ಳ ಒಡ್ಡುನಿಂದ ಶಿವಮೊಗ್ಗ ಮತ್ತು ಹೊನ್ನಾಳಿ ತಾಲ್ಲೂಕು ಗಳ ದೊಡ್ಡ ಕೆರೆಗಳಿಗೆ ಪಂಪು ಮೂಲಕ ನೀರನ್ನೊದಗಿಸಂವುದು.

೮೪೫. ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ತಾಲ್ಲೂಕು ಶೀಗೇಹಳ್ಳ ಬಡ್ಡುನಿಂದ ಮಳಿಗಾಲದಲ್ಲಿ ನೀರನ್ನು ಪಂಪ್ ಮೂಲಕ ಮೇಲಕ್ಕೆತ್ತಿ, ಶಿವಮೊಗ್ಗ ತಾಲ್ಲೂಕು, ಮತ್ತು ಹೊನ್ನಾಳಿ ತಾಲ್ಲೂಕಿನಲ್ಲಿರುವ ದೊಡ್ಡ ಕೆರೆಗಳನ್ನು ಭರ್ತಿ ಮಾಡಿದಲ್ಲಿ ಪ್ರಯೋಜನವಾಗುವುದೆಂಬ ವಿಷಯವು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಸೂಕ್ತ ಅಂದಾಜು ತಯಾರಿಸಿ ಕಾಮಗಾರಿ ಕೈಗೆತ್ತಿಕೊಳ್ಳುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಶೀಗೇಹಳ್ಳ ಒಡ್ಡುವಿನಿಂದ ನೀರನ್ನು ಪಂಪು ಮೂಲಕ ಮೇಲೆತ್ತಿ, ಹೊನ್ನಾಳಿ ಮತ್ತು ಶಿವಮೊಗ್ಗ ತಾಲ್ಲೂಕಿನ ಕೆರೆಗಳನ್ನು ಭರ್ತಿ ಮಾಡಲು ತಾಂತ್ರಿಕವಾಗಿ ಸಾಧ್ಯವಾಗುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಡಿ.ಜಿ. ಬಸವನಗೌಡ.—ಸ್ವಾಮಿ, ಈಗ್ಗೆ ಎರಡು ತಿಂಗಳ ಹಿಂದೆ ಮಾನ್ಯ ಸಚಿವರು ಶಿವಮೊಗ್ಗಕ್ಕೆ ಭೇಟಿ ಇತ್ತಾಗ ಅನೇಕ ಜನ ಅಚ್ಚುಕಟ್ಟುದಾರರು ತಮ್ಮ ಮನವಿಗಳನ್ನು ಕೊಟ್ಟು ವಿಷದವಾಗಿ ತಿಳಿಸಿದ್ದಾರೆ, ಮಾನ್ಯ ಮಂತ್ರಿಗಳೂ ಕೂಡ ಇದನ್ನು ಪರಿಶೀಲಿಸುತ್ತೇನೆಂದು ಹೇಳಿ ಬಂದಿದ್ದಾರೆ. ಜಗಜ್ಯೋತಿ ಬಸವಣ್ಣನವರು ''ನೀನೊಲಿದರೆ ಕೊರಡು ಕೊನರುವುದಯ್ಯ'' ಎಂದು ಹೇಳಿದ್ದಾರೆ. ಅದೇರೀತಿ ''ದೇವೇಗೌಡರು ಒಲಿದರೆ ನೀರು ಬರುವುದಯ್ಯಾ'' ಎಂದು ನಾವು ಹೇಳಬೇಕಾಗಿದೆ. ಹೊನ್ನಾಳಿ ಮತ್ತು ಶಿವಮೊಗ್ಗ ತಾಲ್ಲೂಕಿಗೆ ಶೀಗೇಹಳ್ಳಿಒಡ್ಡಿನಿಂದ ನೀರನ್ನು ಒದಗಿಸಿದರೆ ಸುಮಾರು ೧೨ ಸಾವಿರ ಎಕರೆ ನೀರಾವರಿಯಾಗುತ್ತದೆ. ಹಿರೇಹಳ್ಳ ಪ್ರಾಜೆಕ್ಟ್‌ಗೋಸ್ಕರ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಅದೇರೀತಿ ಶೀಗೇಹಳ್ಳ ಒಡ್ಡಿನಿಂದ ನೀರನ್ನು ಎತ್ತಿ ಶಿವಮೊಗ್ಗಾ ಮತ್ತು ಹೊನ್ನಾಳಿ ತಾಲ್ಲೂಕಿನಲ್ಲಿರುವ ದೊಡ್ಡ ಕೆರೆಗಳನ್ನು ಭರ್ತಿಮಾಡಿದರೆ ಅಲ್ಲಿನ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಆದ್ದರಿಂದ ಮುಂದಿನ ವರ್ಷವಾದರೂ ಈ ಕಾರ್ಯವನ್ನು ಮಾಡಿಕೊಡಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ಮಾನ್ಯ ಸದಸ್ಯರಾದ ಬಸವನಗೌಡ ಬಾಯಲ್ಲಿ ಇವತ್ತು ಬಸವಣ್ಣನವರ ವಚನ ಬರುತ್ತಿರುವುದೆಂ ಸಂತೋಷದ ವಿಚಾರ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ಇತ್ತೀಚೆಗೆ ಶಿವಮೊಗ್ಗಾಕ್ಕೆ ಹೋಗಿದ್ದಾಗ ಅಲ್ಲಿಯ ರೈತರು ಮನವಿಯನ್ನು ಕೊಟ್ಟಿರುವುದು ನಿಜ. ಆದರೆ ನಮ್ಮ ಇಲಾಖೆಯ ಅಧಿಕಾರಿಗಳು ಕೊಟ್ಟಿರತಕ್ಕ ವರದಿಯಲ್ಲಿ ನೋಡಿದರೆ ಇದಕ್ಕೆ ತಾಂತ್ರಿಕ ತೊಂದರೆ ಇದೆ. ಆದರೆ ಅಧಿಕಾರಿಗಳು ಕೊಟ್ಟಿರತಕ್ಕ ವರದಿಯೇ ಅಂತಿಮ ಅಲ್ಲ ಇದನ್ನು ಮತ್ತೆ ಪರಿಶೀಲಿಸಿ ನೋಡುತ್ತೇನೆ.